ಆ) ಇಲ್ಲ, ತಿದ್ದುಪಡಿಯು ನಿಯಮದಂತೆ ಸಣ್ಣ ಉದ್ದಿಮೆದಾರರು ಸಣ್ಣ ಕಲ್ಲು ಗಣಿ ಗುತ್ತಿಗೆಯನ್ನು ಪಡೆದು ಕೆಲಸ ನಿರ್ವಹಿಸಬಹುದಾಗಿದೆ.

ಇ) ತಿದ್ದುಪಡಿಯು ನಿಯಮದಂತೆ ಬಂದಿರುವ ಅರ್ಜಿಗಳನ್ನು ಗಣಿ ಮತ್ತು ಭೂವಿಜ್ಞಾನ ಇಲಾಖೆಯು ಪರಿಗಣಿಸುತ್ತಿದೆ.

ದಿನಾಂಕ ೨೨-೫-೯೦ ರಂದು ಗಣಿ ಮತ್ತು ಭೂವಿಜ್ಞಾನ ಇಲಾಖೆಗೆ ಕರಿಕಲ್ಲು ಕ್ವಾರಿಗಳನ್ನು ಪಡೆಯಲು (ಗಾಡಿ) ಬಂದಿರುವ ಅರ್ಜಿಗಳು

೭೫೮. ಶ್ರೀ ಎಂ. ಪಿ. ವೆಂಕಟೇಶ್ (ಹೆಗ್ಗಡದೇವನಕೋಟೆ). - ಮಾನ್ಯ ಸಮಾಜ ಕಲ್ಯಾಣ ಗಣಿ ಮತ್ತು ಭೂವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಿನಾಂಕ ೨೨-೫-೯೦ ರಂದು ಗಣಿ ಮತ್ತು ಭೂವಿಜ್ಞಾನ ಇಲಾಖೆಗೆ ಕರಿಕಲ್ಲು ಕ್ವಾರಿಗಳ ಬಗ್ಗೆ ಪರವಾನಿಗೆ ಪಡೆಯಲು ಎಷ್ಟು ಅರ್ಜಿಗಳು ಬಂದಿರುತ್ತವೆ.

ಆ) ದಿನಾಂಕ ೨೩-೫-೯೦ ರಂದು ಗಣಿ ಮತ್ತು ಭೂವಿಜ್ಞಾನ ಇಲಾಖೆಗೆ ಕರಿಕಲ್ಲು ಕ್ವಾರಿಗಳ ಬಗೆ ಪರವಾನಿಗೆ ಪಡೆಯಲು ಎಷ್ಟು ಅರ್ಜಿಗಳು ಬಂದಿರುತ್ತವೆ.

ಇ) ದಿನಾಂಕ ೨೨-೫-೯೦ ರಂದು ಮತ್ತು ೨೩-೫-೯೦ ರಂದು ಕ್ವಾರಿ ಪಡೆಯಲು ಗಣಿ ಇಲಾಖೆಗೆ ಸಲ್ಲಿಸಿರುವ ಅರ್ಜಿದಾರರ ಹೆಸರುಗಳೇನು ? ಹಾಗೂ ಎಷ್ಟು ಪರವಾನಿಗೆಗಳನ್ನು ಕೊಡಲಾಗಿದೆ ?

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ, ಗಣಿ ಮತ್ತು ಭೂವಿಜ್ಞಾನ ಸಚಿವರು).—

ಅ) ಯಾವುದು ಇಲ್ಲ.

ಆ) ಯಾವುದೂ ಇಲ್ಲ.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ಖಾದಿ ಬೋರ್ಡಿನ ಲಾಭ ನಷ್ಟದ ವಿಚಾರ

೭೨೨. ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ). —ಮಾನ್ಯ ಸಣ್ಣ ಕೈಗಾರಿಕೆಗಳ ಉಪಮಂತ್ರಿಗಳಂ ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದ ಖಾದಿ ಮಂಡಲಿ ೧೯೮೭-೮೮, ೮೮-೮೯, ೮೯-೯೦ರಲ್ಲಿ ಲಾಭದಲ್ಲಿದೆಯೇ : ನಷ್ಟದಲ್ಲಿದೆಯೇ, ವಿವರ ನೀಡುವುದು.

ಆ) ಒಂದು ವೇಳೆ ನಷ್ಟದಲ್ಲಿದ್ದರೆ, ಅದಕ್ಕೆ ಕಾರಣಗಳೇನು ?

ಇ) ಈ ಮಂಡಲಿಯನ್ನು ಉತ್ತಮ ರೀತಿಯಲ್ಲಿ ನಡೆಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ?

ಶ್ರೀಮತಿ ಸರೋಜಾ ವಸಂತ (ಸಣ್ಣ ಕೈಗಾರಿಕೆಗಳ ಉಪಸಚಿವೆಯವರು).—

ಅ) ರಾಜ್ಯದ ಖಾದಿ ಗ್ರಾಮೋದ್ಯೋಗ ಮಂಡಲಿಯು ನೇರವಾಗಿ ಯಾವುದೇ ರೀತಿಯ ಉತ್ಪಾದನೆಯ, ಮಾರಾಟದ ಹಾಗೂ ವ್ಯಾಪಾರದ ಚಟುವಟಿಕೆಗಳಲ್ಲಿ ತೊಡಗಿರುವುದಿಲ್ಲ. ಮಂಡಲಿಯು ಖಾದಿ ಗ್ರಾಮೋದ್ಯೋಗ ಆಯೋಗದಿಂದ ಖಾದಿ ಗ್ರಾಮೋದ್ಯೋಗಗಳ ಅಭಿವೃದ್ಧಿಗೆ ಪ್ರತಿವರ್ಷ ಧನ ಸಹಾಯ ಪಡೆದು, ಆ ಧನಸಹಾಯವನ್ನು ಖಾದಿ ಗ್ರಾಮೋದ್ಯೋಗಗಳಲ್ಲಿ ನಿರತರಾಗಿರುವ ಸಂಘ ಸಂಸ್ಥೆ ವೈಯಕ್ತಿಕ ಕಸುಬುದಾರರಿಗೆ ವಿತರಣೆ ಮಾಡುತ್ತಿದೆ. ಖಾದಿ ಗ್ರಾಮೋದ್ಯೋಗ ಘಟಕಗಳಿಂದ ಸಾಲ ಮತ್ತು ಬಡ್ಡಿಯನ್ನು ವಸೂಲಿ ಮಾಡಿ ಪುನಃ ಅದನ್ನು ಖಾದಿ ಗ್ರಾಮೋದ್ಯೋಗ ಆಯೋಗಕ್ಕೆ ನೀಡುತ್ತದೆ. ಮಂಡಲಿಯ ಸಿಬ್ಬಂದಿಯ ಸಂಬಳ ಸಾರಿಗೆ ಇತ್ಯಾದಿಗಳನ್ನು ರಾಜ್ಯ ಸರ್ಕಾರ ಭರಿಸುತ್ತದೆ. ಆದ್ದರಿಂದ, ಮಂಡಲಿಯಲ್ಲಿ ಲಾಭ ಅಥವಾ ನಷ್ಟದ ಪ್ರಶ್ನೆ ಉದ್ಭವಿಸುವುದಿಲ್ಲ.

ಆ) ಉದ್ಭವಿಸುವುದಿಲ್ಲ.